**ಪಟ್ಟಾಭಿರಾಮನಗರ, ವಾರ್ಡ್ ಸಂಖ್ಯೆ: 168**

**ದಿನಾಂಕ: 14.09.2021 ರಂದು ವಾರ್ಡ್ ಸಂ: 168 ಪಟ್ಟಾಭಿರಾಮನಗರ ನಡೆದ ವಾರ್ಡ್ ಸಭೆ:**

**ಸಮಿತಿ ಸಭೆಯ ನಡವಳಿಗಳು**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ಜಾನಾರ್ಧನ್.ಪಿ | ಅಧ್ಯಕ್ಷರು |
| 02 | ಶ್ರೀ ಸಂತೋಷ್ ಕುಮಾರ್.ಬಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ಜಯಶಂಕರ್.ಬಿ.ಎಸ್ | ಸ.ಕಾ.ನಿ.ಅ, ಜಯನಗರ ಉಪವಿಭಾಗ |
| 04 | ಶ್ರೀ ಮಂಜುನಾಥ್ ರೆಡ್ಡಿ | ಕಾ.ಪ.ಅ ಜಯನಗರ ವಿಭಾಗ |
| 05 | ಶ್ರೀಮತಿ ಶಶಿಕಲಾ | ಸ.ಕಾ.ನಿ.ಅ (ಘನತ್ಯಾಜ್ಯ) ಜಯನಗರ ವಿಭಾಗ |
| 06 | ಶ್ರೀ ದೇಸಾಯಿ | ಸ.ಕಾ.ನಿ.ಅ ಬೆಂಗಳೂರು ಜಲಮಂಡಳಿ |
| 07 | ಶ್ರೀ ಉಮೇಶ್ | ಸ.ಕಾ.ನಿ.ಅ ವಿದ್ಯುತ್-ದಕ್ಷಿಣ |
| 08 | ಶ್ರೀ ಸುದರ್ಶನ್ | ಆರಕ್ಷಕ ನಿರೀಕ್ಷಕರು, ಜಯನಗರ ಪೋಲೀಸ್ ಠಾಣೆ |
| 09 | ಕು: ಕಾವ್ಯ | ಕಿರಿಯ ಆರೋಗ್ಯ ಪರೀವಿಕ್ಷಕರು |
| 10 | ಶ್ರೀ ರಾಮಚಂದ್ರ | ಹಿರಿಯ ಆರೋಗ್ಯ ಪರೀವಿಕ್ಷಕರು |
| 11 | ಶ್ರೀ ಕೇಶವ್ | ಸ್ಥಳೀಯಾ ನಿವಾಸಿ |
| 12 | ಶ್ರೀ ರಾಮಚಂದ್ರ ರಾಜು | ಸ್ಥಳೀಯಾ ನಿವಾಸಿ |
| 13 | ಶ್ರೀ ಚಂದ್ರು | ಸ್ಥಳೀಯಾ ನಿವಾಸಿ |
| 14 | ಶ್ರೀ ಅಶ್ವಥ್ | ಸ್ಥಳೀಯಾ ನಿವಾಸಿ |
| 15 | ಶ್ರೀ ಚೇತನ್ | ಸ್ಥಳೀಯಾ ನಿವಾಸಿ |

**ಮಾನ್ಯ ಶಾಸಕರು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿದ್ದರಿಂದ ವಾರ್ಡ್ ಹಲವಾರು ನಾಗರೀಕರು ಹಾಜರಿದ್ದರು.**

ವಾರ್ಡ್: ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಪ್ರಾರಂಭಿಸಿದರು:

1. ಶ್ರೀ ಚಂದ್ರಶೇಖರ್ ರಾಜು ರವರು ಮಾತನಾಡುತಾ ಜಯನಗರ ವಾಣೀಜ್ಯ ಸಂಕಿರ್ಣದ ಸುತ್ತಾಮುತ್ತಾ ಅನಧಿಕೃತವಾಗಿ ಪಾದಾಚಾರಿ ಮಾರ್ಗದ ಮೇಲೆ ಮಳಿಗೆಗಳನ್ನು ಹಾಕಿದ್ದು ಅದನ್ನು ತೆರೆವುಗೊಳಿಸುವಂತೆ ಕೋರಿದರು (ಕ್ರಮ ಕಾಮಗಾರಿ ಇಲಾಖೆ, ಬೃ.ಬೆ.ಮ.ಪಾ) ಹಾಗೂ 11ನೇ ಮುಖ್ಯರಸ್ತೆ ಒಂದು ಬದಿಯಲ್ಲಿ ದ್ವಿಚಕ್ರ ವಾಹನ ನಿಲುಗಡೆಗೆ ಅನುವುಮಾಡಿಕೊಡುವಂತೆಯು ಸಹ ಕೋರಿದರು (ಕ್ರಮ ಸಂಚಾರಿ ಆರಕ್ಷಕ ನಿರೀಕ್ಷಕರು, ಜಯನಗರ).

2. ಈ ಮದ್ಯ ಮಾತಾನಾಡುತ್ತಾ, ಮಾನ್ಯ ಶಾಸಕರು ಪಟ್ಟಾಭಿರಾಮನಗರದ ಉದ್ಯಾನವನಗಳು ಮತ್ತು ಮಾರೇನಹಳ್ಳಿ ಕೆರೆ ಅಂಗಳ ಪ್ರದೇಶ ತಪಾಸಣೆಗೆ ಸಮಯ ಮತ್ತು ದಿನಾಂಕ ನಿಗಧಿಪಡಿಸುವಂತೆ ಸೂಚಿಸಿದರು.

3. ಕು.ರಮ್ಯ (ಎನ್.ಜಿ.ಒ)ರವರು ಮಾತಾನಾಡುತಾ ಜಯನಗರ 3ನೇ ಬ್ಲಾಕ್‌ನಲ್ಲಿರುವ ಪಾಲಿಕೆಯ ಗೊಬ್ಬರ ತಾಯಾರಿಸುವ ಘಟಕವನ್ನು ಪುನಾರಾಂಭಿಸಲು ಕೋರಿದರು (ಕ್ರಮ ಸಕಾನಿಅ ಘನತ್ಯಾಜ್ಯ).

4. ಶ್ರೀ ಕುಮಾರೇಶ್ ರವರು ಮಾತಾನಾಡುತ್ತಾ, ಜೈನ ಮಂದಿರದ ಮುಂಭಾಗ ಪಾದಚಾರಿ ಮಾರ್ಗದ ಮೇಲೆ ಹಾಕಿರುವ ಟೈಲ್ಸ್ ಕುಸಿದಿದ್ದು , ದುರಸ್ತೀ ಮಾಡಿಸಿಕೊಡುವಂತೆ ಕೋರಿದರು (ಕ್ರಮ ಸಾಕಾನಿಅ. ರಸ್ತೆ ಮೂಲಬೂತ ಸೌಕರ್ಯ).

5. ಶ್ರೀ ಕೇಶವ್ ಕುಮಾರ್ ರವರು ಮಾತಾನಾಡುತ್ತಾ ವಾರ್ಡ್‌ನಲ್ಲಿ ಬೀದಿ ದೀಪಗಳ ನಿರ್ವಹಣೆಗೆ ಹೂಸದಾಗಿ ಗುತ್ತಿಗೆದಾರರು ನಿಯೋಜನೆಗೊಂಡಿದ್ದು ಅದರ ಬಗ್ಗೆ ಸಭೆಗೆ ಮಾಹಿತಿ ನೀಡಲು ಕೋರಿದರು (ಕ್ರಮ: ಸಕಾನಿಅ ವಿದ್ಯುತ್-ದಕ್ಷಿಣ) ಹಾಗೂ 9ನೇ ಮುಖ್ಯರಸ್ತೆ 36ನೇ ಅಡ್ಡರಸ್ತೆಯಲ್ಲಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಜಾಗದಲ್ಲಿ ಅನಧಿಕೃತವಾಗಿ ಘನತ್ಯಾಜ್ಯದ ಆಟೋ ಟಿಪ್ಪರ್‌ಗಳನ್ನು ನಿಲುಗಡೆ ಮಾಡುತ್ತಿರುವುದಾಗಿ ತಿಳಿಸಿದರು (ಕ್ರಮ: ಸಕಾನಿಅ ಘನತ್ಯಾಜ್ಯ).

6. ಶ್ರೀಮತಿ ಸರೋಜರವರು ಮಾತಾನಾಡುತ್ತಾ, 18ನೇ ಸಿ ಮುಖ್ಯರಸ್ತೆ 9ನೇ ಬ್ಲಾಕ್ ಜಯನಗರ ಇಲ್ಲಿ ಒಣತ್ಯಾಜ್ಯವನ್ನು ಸಮಯಕ್ಕೆ ಸೇರಿಯಾಗಿ ಸ್ವೀಕರಿಸಲು ಬರುತ್ತಿಲ್ಲವೆಂದು ತಿಳಿಸಿದರು. (ಕ್ರಮ ಸಕಾನಿಅ ಘನತ್ಯಾಜ್ಯ) ಹಾಗೂ ಶಾಂತಿ ಅಪಾರ್ಟ್‌ಮೆಂಟ್ ಸುತ್ತಾಮುತ್ತಾ ಅನಧಿಕೃತವಾಗಿ ತಳ್ಳುವ ಗಾಡಿಯನ್ನು ನಿಲ್ಲಿಸುತ್ತಿದ್ದು, ಇದರಿಂದ ಈ ರಸ್ತೆಯಲ್ಲಿ ಸಂಚಾರಿಸುವುದು ಕಷ್ಟವಾಗುತ್ತಿರು ಬಗ್ಗೆ ಸಬೆಗೆ ತಿಳಿಸಿದರು (ಕ್ರಮ ಸಂಚಾರಿ ಆರಕ್ಷಕ ನಿರೀಕ್ಷಕರು, ಜಯನಗರ).

**ನಿರ್ಣಯ:-** ಈ ವಿಷಯಕ್ಕೆ ಸಮಿತಿಯು ಒಪ್ಪಗೆ ತಿಳಿಸಿರುತ್ತಾರೆ. ವಾರ್ಡ್ ಸಮೀತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು, ಮುಂದಿನ ಸಭೆಯನ್ನು ದಿ: 25.09.2021ರಂದು ಬೆಳ್ಳಗೆ 11.00ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ಹಾಜರಾಗುವಂತೆ, ಪತ್ರ ಕಳುಹಿಸುವಂತೆ ತಿಳಿಸಿದರು ಮಾನ್ಯ ನೋಡಲ್ ಅಧಿಕಾರಿಯವರು ತಿಳಿಸಿದರು. .

ಕಾರ್ಯದರ್ಶಿ ಮತ್ತು ಸಂಚಾಲಕರು
ಹೆಸರು: ಸಂತೋಷ್ ಕುಮಾರ್.ಬಿ
ಸಹಾಯಕ ಅಭಿಯಂತರರು